ಕರ್ನಾಟಕ ಸರ್ಕಾರ

**ಅತಿ ಜರೂರು**

## ಕಾಲೇಜು ಶಿಕ್ಷಣ ಇಲಾಖೆ

ದೂರವಾಣಿ: 080-22343904/05

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು-560001.

ಸಂಖ್ಯೆ: ಕಾಶಿಇ/ಶೈವಿ/50/ವಿಜ್ಞಾನ ಅನುದಾನ/2016-17

ದಿನಾಂಕ:21.11.2016.

**ನೆನಪೋಲೆ-2**

ಇವರಿಗೆ,

**ವಿಜ್ಞಾನ ಕೋರ್ಸುಗಳನ್ನು ಪ್ರಾರಂಭಿಸಿರುವ**
**ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ**
**ಪ್ರಾಂಶುಪಾಲರುಗಳಿಗೆ.**

ಮಾನ್ಯರೆ,

ವಿಷಯ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಾರಂಭಿಸಲಾಗಿರುವ ಪದವಿ ವಿಜ್ಞಾನ ಹಾಗೂ ಸ್ನಾತಕೋತ್ತರ ವಿಜ್ಞಾನ ಕೋರ್ಸುಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: 1) ಈ ಕಛೇರಿಯ ಇದೇ ಕ್ರಮಾಂಕದ ಪತ್ರ ದಿನಾಂಕ:25.06.2016 ಮತ್ತು ನೆನಪೋಲೆ ದಿನಾಂಕ:23.07.2016.
2) ದಿನಾಂಕ:27.09.2016 ರ ಈ ಕಛೇರಿಯ ಅನುದಾನ ಬಿಡುಗಡೆ ಆದೇಶ ಸಂಖ್ಯೆ: ಕಾಶಿಇ/ಶೈವಿ/50/ವಿಜ್ಞಾನ ಅನುದಾನ/2016-17.

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2016-17ನೇ ಸಾಲಿನಲ್ಲಿ ವಿಜ್ಞಾನ ವಿಷಯಗಳಲ್ಲಿ ಪದವಿ ಹಾಗೂ ಸ್ನಾತಕೋತ್ತರ ಕೋರ್ಸುಗಳನ್ನು ಹೊಂದಿರುವ ಸರ್ಕಾರಿ ಕಾಲೇಜುಗಳಿಗೆ **ಅವಶ್ಯವಿರುವ ಪ್ರಯೋಗಾಲಯ ಉಪಕರಣಗಳು ಮತ್ತು ರಾಸಾಯನಿಕ/ಕನ್ಸೂಮಬಲ್ಸ್‌ಗಳನ್ನು** ಒದಗಿಸಿಕೊಳ್ಳಲು ಅಗತ್ಯವಿರುವ ಅನುದಾನದ ವಿವರಗಳನ್ನು ನಿಗದಿತ ನಮೂನೆಯಲ್ಲಿ ಪ್ರಸ್ತಾವನೆಯನ್ನು ದಿನಾಂಕ:30.07.2016 ರೊಳಗಾಗಿ ಈ ಕಛೇರಿಗೆ ಸಲ್ಲಿಸುವಂತೆ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರಿಗೆ/ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಉಲ್ಲೇಖ-(1)ರ ಪತ್ರ ಹಾಗೂ ನೆನಪೋಲೆ ಪತ್ರಗಳಲ್ಲಿ ಸೂಚಿಸಲಾಗಿತ್ತು.

ಅದರಂತೆ, ಪದವಿ/ಸ್ನಾತಕೋತ್ತರ ವಿಜ್ಞಾನ ಕೋರ್ಸುಗಳನ್ನು ನಡೆಸುತ್ತಿರುವ ಒಟ್ಟು 137 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಂದ ಅನುದಾನ ಬಿಡುಗಡೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಈ ಕಾಲೇಜುಗಳಿಗೆ ಉಲ್ಲೇಖ-(2) ರ ಈ ಕಛೇರಿಯ ಅನುದಾನ ಬಿಡುಗಡೆ ಆದೇಶದಲ್ಲಿ ಪ್ರಯೋಗಾಲಯಕ್ಕೆ ಅಗತ್ಯವಿರುವ ಉಪಕರಣಗಳು ಹಾಗೂ ರಾಸಾಯನಿಕ/ಕನ್ಸುಮಬಲ್ಸ್‌ಗಳನ್ನು ಒದಗಿಸಿಕೊಳ್ಳಲು ಒಟ್ಟು ರೂ.428.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

ಆದರೆ, ಇನ್ನುಳಿದ ಕೆಲವು ಕಾಲೇಜುಗಳಿಂದ ಅನುದಾನ ಕೋರಿ ಇದುವರೆವಿಗೂ ಪ್ರಸ್ತಾವನೆಯನ್ನು ಸಲ್ಲಿಸಿರುವುದಿಲ್ಲ. ಆದುದರಿಂದ ಈ ಬಗ್ಗೆ ವೈಯಕ್ತಿಕ ಗಮನ ಹರಿಸಿ, ಅನುದಾನದ ಅವಶ್ಯಕತೆ ಇರುವ ಪದವಿ/ಸ್ನಾತಕೋತ್ತರ ಕೋರ್ಸುಗಳನ್ನು ಹೊಂದಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು ಅಪೇಕ್ಷಿತ ಮಾಹಿತಿಯನ್ನು ಕೆಳಕಂಡ ನಮೂನೆಯಲ್ಲಿ ಸಿದ್ಧಪಡಿಸಿ, ಪ್ರಸ್ತಾವನೆಯನ್ನು ಕಡ್ಡಾಯವಾಗಿ **ದಿನಾಂಕ:26.11.2016 ರೊಳಗಾಗಿ ಖುದ್ದಾಗಿ ಈ ಕಛೇರಿಯ ಶೈಕ್ಷಣಿಕ ವಿಭಾಗಕ್ಕೆ ಬಂದು ಸಲ್ಲಿಸುವಂತೆ ಸೂಚಿಸಲಾಗಿದೆ.** ತಪ್ಪಿದಲ್ಲಿ ಮುಂದಿನ ಆಗು-ಹೋಗುಗಳಿಗೆ ತಾವೇ ಜವಾಬ್ದಾರರಾಗಿರುತ್ತೀರಿ ಎಂಬ ಅಂಶವನ್ನೂ ಸಹ ತಮ್ಮ ಗಮನಕ್ಕೆ ತರಲಾಗಿದೆ.

**ನಮೂನೆ**

| ಕ್ರ. ಸಂ. | ಕಾಲೇಜಿನ ಹೆಸರು & ವಿಳಾಸ | ಪದವಿ & ಸ್ನಾತಕೋತ್ತರ ವಿಜ್ಞಾನ ಕೋರ್ಸ್/ವಿಷಯ ಸಮೂಹ | ಕೋರ್ಸ್ ಪ್ರಾರಂಭವಾದ ವರ್ಷ | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ(2016-17) | | | ಅಗತ್ಯವಿರುವ ಅನುದಾನ (ರೂ.ಗಳಲ್ಲಿ) | | ಒಟ್ಟು ಮೊತ್ತ (ರೂ.ಗಳಲ್ಲಿ) |
|---|---|---|---|---|---|---|---|---|---|
| | | | | I Yr | II Yr | III Yr | ಪ್ರಯೋಗಾಲಯ ಉಪಕರಣಗಳಿಗೆ | ರಾಸಾಯನಿಕ/ ಕನ್ಸುಮಬಲ್ಸ್‌ಗಳಿಗೆ | |
| | | | | | | | | | |

ತಮ್ಮ ವಿಶ್ವಾಸಿ,

ಕಾಲೇಜು ಶಿಕ್ಷಣ ನಿರ್ದೇಶಕರು

ಪ್ರತಿ:
1) ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರಗಿ-***ಕೂಡಲೇ ಅಗತ್ಯ ಕ್ರಮಕ್ಕಾಗಿ.***
2) ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಮಾ.ತಂ.ವಿ. - ಸದರಿ ಪತ್ರವನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
3) ಕಛೇರಿ ಪ್ರತಿ.